ಓ.ಎಸ್ ನಂ.22/2017

ಪಿ .ಡಬ್ಲ್ಯೂಃ 1

(ಇಂದು ದಿನಾಂಕಃ03-01-2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಮ್.ಎಲ್.ಎನ್ ವಕೀಲರಿಂದಃ

ನಿ.ಪಿ-11 ತಯಾರಿಸುವ ಕಾಲಕ್ಕೆ ದಾವಾಸ್ತಿಯಲ್ಲಿ ಪ್ರತಿವಾದಿ ಬಾಡಿಗೆದಾರರಾಗಿ ಸ್ವಾಧೀನದಲ್ಲಿದ್ದರು . ನಿಪಿ-11 ಲೀಸ್ ಡೀಡ್ ನ್ನು ತಯಾರಿಸಲು ನನ್ನ ಮಾವ ಮಾಹಿತಿ ಕೊಟ್ಟಿರುತ್ತಾರೆ . ನಿಪಿ-11 ಲೀಸ್ ಡೀಡ್ ನ್ನು ತಯಾರಿಸುವ ಕಾಲಕ್ಕೆ ನಾನೂ ಸಹ ಹಾಜರಿದ್ದೆನು . ನಿಪಿ-11 ಲೀಸ್ ಡೀಡ್ ನ್ನು ಆರ್ ಕೆ ಜೆರಾಕ್ಸ್ ನಲ್ಲಿ ತಯಾರಿಸಲಾಗಿರುತ್ತದೆ . ಷದ್ರಿ ದಾಖಲೆಯನ್ನು ತಯಾರಿಸುವ ಕಾಲಕ್ಕೆ ನಾನು ಮತ್ತು ನನ್ನ ಮಾವ ಹಾಜರಿದ್ದೆವು ಎಂದು ನುಡಿದಿರುವುದು ಸರಿ ಇರುತ್ತದೆ . ಆ ಸಮಯದಲ್ಲಿ ಪ್ರತಿವಾದಿ ಅಂಗಡಿಯಲ್ಲಿ ಇದ್ದರು . ನಿಪಿ-11 ಲೀಸ್ ಡೀಡ್ ನ್ನು ತಯಾರಿಸಲು ನಾನು ಮತ್ತು ನನ್ನ ಮಾವ ಮಾತ್ರ ಮಾಹಿತಿ ನೀಡಿರುತ್ತೇವೆ ಎಂದರೆ ಸಾಕ್ಷಿ ಪ್ರತಿವಾದಿಯು ಸಹ ಮಾಹಿತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ . ನಿಪಿ-11 ಲೀಸ್ ಡೀಡ್ ನ್ನು ತಯಾರಿಸಲು ಪ್ರತಿವಾದಿ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ನಿಪಿ-11 ಲೀಸ್ ಡೀಡ್ ನಲ್ಲಿ ವಾದಿ ಮಾಲೀಕ ಹಾಗೂ ಸ್ವಾಧೀನ ಅನುಭವದಲ್ಲಿ ಇರುತ್ತಾನೆ ಎಂದು ಬರೆದಿರುವುದು ಸರಿ ಇರುತ್ತದೆ . ಶೋಪಿಂಗ್ ಕಾಂಪ್ಲೆಕ್ಸ್ ಎಂದರೆ ದಾವಾ ಆಸ್ತಿಯನ್ನು ಸಹ ಒಳಗೊಂಡಿರುತ್ತದೆ . ಜೆರಾಕ್ಸ್ ಅಂಗಡಿಯಲ್ಲಿ ಪ್ರತಿವಾದಿಯು ದಾವಾ ಅಂಗಡಿಯನ್ನು ಬಾಡಿಗೆಗೆ ಕೇಳುತ್ತಿದ್ದಾರೆ ಎಂದು ನಿಪಿ -11 ಲೀಸ್ ಡೀಡ್ ನ್ನು ತಯಾರು ಮಾಡಿರುತ್ತೇವೆ ಎಂದರೆ ಸರಿ . ನಿಪಿ-11 ಲೀಸ್ ಡೀಡ್ ಗೂ ಪ್ರತಿವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ . ನಿಪಿ-11 ಲೀಸ್ ಡೀಡ್ ನಲ್ಲಿ ಪ್ರತಿವಾದಿ ಈ ಹಿಂದೆ ಬಾಡಿಗೆದಾರರಾಗಿದ್ದರು ಎಂದು ತೋರಿಸಲು ಯಾವುದೇ ಆಧಾರ ಇರುವುದಿಲ್ಲ ಎಂದರೆ ಸರಿಯಲ್ಲ . ನಿಪಿ-11 ಲೀಸ್ ಡೀಡ್ ನಲ್ಲಿ ಪ್ರತಿವಾದಿ ಈ ಹಿಂದೆ ಬಾಡಿಗೆದಾರರಾಗಿದ್ದರು ಎನ್ನುವ ಬಗ್ಗೆ ನಮೂದಿಸಿರುವುದಿಲ್ಲ . ನಿಪಿ-12 ಲೀಸ್ ಡೀಡ್ ನ್ನು ವಾದಿ ಮತ್ತು ಪ್ರತಿವಾದಿಯು ಸೇರಿ ಮಾಡಿರುತ್ತಾರೆ . ಆ ಸಮಯದಲ್ಲಿ ನಾನು ಇರಲಿಲ್ಲ . ನಿಪಿ-12 ಲೀಸ್ ಡೀಡ್ ಗೂ ಪ್ರತಿವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ . ನಿಪಿ-12 ಲೀಸ್ ಡೀಡ್ ನಲ್ಲಿ ಪ್ರತಿವಾದಿಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ . ನಿಪಿ-12 ಲೀಸ್ ಡೀಡ್ ನ 4 ನೇ ಪುಟದಲ್ಲಿ ಶೆಡ್ಯೂಲ್ ನ್ನು ನಮೂದಿಸಿರುವುದಿಲ್ಲ . ಅದೇ ರೀತಿ ನಿಪಿ-13 ಲೀಸ್ ಡೀಡ್ ನ 4 ನೇ ಪುಟದಲ್ಲಿ ಶೆಡ್ಯೂಲ್ ನ್ನು ನಮೂದಿಸಿರುವುದಿಲ್ಲ ಎಂದರೆ ಸರಿ . ನಿಪಿ-13 ಲೀಸ್ ಡೀಡ್ ನಲ್ಲಿರುವ ಸಹಿ ಪ್ರತಿವಾದಿಯ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ . ನಿಪಿ-13 ಲೀಸ್ ಡೀಡ್ ನ್ನು ಸೃಷ್ಟಿಸಿದ್ದು , ಅದಕ್ಕೂ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನಿಪಿ-13 ಲೀಸ್ ಡೀಡ್ ನಲ್ಲಿ ಒಸೀಮ್ ಹಾಗೂ ಖತೀಬ್ ಬಾಷಾ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ . ಖತೀಬ್ ಬಾಷಾ ಎನ್ನುವ ಸಾಕ್ಷಿದಾರರು ದಾವಾ ಅಂಗಡಿಯ ಪಕ್ಕದ ಅಂಗಡಿಯ ಮಾಲೀಕರಾಗಿರುತ್ತಾರೆ . ಷದ್ರಿ ಇಬ್ಬರು ಸಾಕ್ಷಿದಾರರು ನಮ್ಮ ಸಂಬಂಧಿಕರಲ್ಲ . ನಿಪಿ-14 ಲೀಸ್ ಡೀಡ್ ನಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಶೆಡ್ಯೂಲ್ ನ್ನು ನಮೂದಿಸಿರುವುದಿಲ್ಲ ಎಂದರೆ ಸರಿ . ನಿಪಿ-14 ಲೀಸ್ ಡೀಡ್ ಲ್ಲಿ ರಫಿಯಾ

ಅಬ್ದುಲ್ ನಾಸಿರ್ ರವರು ಬಾಡಿಗೆದಾರರಾಗಿದ್ದರು ಎನ್ನುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ . ರಫಿಯಾ ಅಬ್ದುಲ್ ನಾಸಿರ್ ರವರು ದಾವಾ ಅಂಗಡಿಯಲ್ಲಿ 2 ವರ್ಷ ಗಳ ಕಾಲ ಬಾಡಿಗೆದಾರರಾಗಿದ್ದರು . ಸದ್ರಿ ಯವರು ನಿಪಿ –14 ಲೀಸ್ ಡೀಡ್ ನಿಂದ 2 ವರ್ಷ ಕಾಲ ಬಾಡಿಗೆದಾರರಾಗಿದ್ದರು . ಸದ್ರಿ ಅವರು ದಾವಾ ಅಂಗಡಿಯಲ್ಲಿ ಟೈಲ್ಸ್ ಬ್ಯುಸಿನೆಸ್ ಮಾಡುತ್ತಿದ್ದರು . ಸದ್ರಿ ಅವರು ಯಾವ ಹೆಸರಿನ ಅಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದು ನನಗೆ ನೆನಪಿಲ್ಲ . ಸದ್ರಿಯವರು ಮುಂಗಡ ಹಣವನ್ನು ನೀಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ . ನಿಪಿ–14 ಲೀಸ್ ಡೀಡ್ ಸೃಷ್ಟಿಸಿದ ದಾಖಲೆ ಯಾಗಿದ್ದು ದಾವಾ ಅಂಗಡಿಗೂ ಸದ್ರಿ ದಾಖಲೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ . ನಿಪಿ–15 ಲೀಸ್ ಡೀಡ್ ನಲ್ಲಿ ದಾವಾ ಶೆಡ್ಯೂಲ್ ನ್ನು ನಮೂದಿಸಿರುವುದಿಲ್ಲ ಎಂದರೆಸ ರಿ. ಸದ್ರಿ ದಾಖಲೆಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಅದೇ ರೀತಿ ನಿಪಿ –16 ಲೀಸ್ ಡೀಡ್ ಗೂ ದಾವಾ ಸ್ವತ್ತಿಗೂ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ . ನಿಪಿ–17 ದಾಖಲೆಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಯು ದಾವಾ ಅಂಗಡಿಯ ಬಾಡಿಗೆ ದಾರರಾಗಿರುವುದಿಲ್ಲ ಆದರೂ ಸಹ ಅವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ಈ ದಾವೆಯಲ್ಲಿ ನಾನು ವಾದಿಯ ಜಿಪಿಎ ಹೋಲ್ಡರ್ ನಾಗಿದ್ದರೂ ಸಹ ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ . ಈ ದಾವೆಯಲ್ಲಿ ಬರೆದಿರುವ ಎಲ್ಲಾ ವಿಷಯಗಳು ವಾದಿಗೆ ವೈಯಕ್ತಿಕವಾಗಿ ತಿಳಿದಿರುವುದರಿಂದ ಜಿಪಿಎ ಹೋಲ್ಡರ್ ಆದ ನನಗೆ ಸಾಕ್ಷಿ ನುಡಿಯಲು ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಹೆ.ನ್ಯಾದಂ., ಭಟ್ಕಳ